SEPTEMBER 12, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ರಾಜ್ಯ ಸರ್ಕಾರದ** ಎಲ್ಲ 2 ಸಾವಿರದ 4 ನೂರಾ 56 ಸೇವೆಗಳನ್ನು, **'ಸಕಾಲ ಸೇವೆ'** ಡಿಜಿಟಲ್ ವೇದಿಕೆ ಅಡಿ, ತರಲಾಗುವುದು ಎಂದು, ಪ್ರಜಾಸೇವಾ ಇಲಾಖೆಯ, ಪ್ರಧಾನ ಕಾರ್ಯದರ್ಶಿ, ಹರ್ಷ ಗುಪ್ತಾ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ನಾಗರಿಕರು, ತಮ್ಮ ಮೊಬೈಲ್‌ನಲ್ಲೇ ಎಲ್ಲ ಸೇವೆಗಳನ್ನು, ಸಂಪೂರ್ಣ ಶುಲ್ಕ, ಕಾಗದ ಮತ್ತು ಇಲಾಖೆಗಳ ಸಂಪರ್ಕ ರಹಿತವಾಗಿ ಪಡೆಯಲು, 'ನಮ್ಮ ಸೇವೆ ಆ್ಯಪ್'ನ್ನು ಅಕ್ಟೋಬರ್ 2, ಮಹಾತ್ಮ ಗಾಂಧಿ ಜಯಂತಿಯಂದು, ಬಿಡುಗಡೆ ಮಾಡಲಾಗುವುದು ಎಂದರು.

<><><>

**ಸೌರಫಲಕ ತಯಾರಿಕೆಯಲ್ಲಿ,** ಭಾರತ, ಜಾಗತಿಕವಾಗಿ, ಎರಡನೇ ಸ್ಥಾನದಲ್ಲಿದೆ ಎಂದು ಕೇಂದ್ರ, ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ದೇಶದಲ್ಲಿ ಪ್ರಸ್ತುತ, 35 ಗಿಗಾ ವ್ಯಾಟ್ ಸಾಮರ್ಥ್ಯದ, ಸೌರಶಕ್ತಿ ಫಲಕಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ 100 ಗಿಗಾ ವ್ಯಾಟ್ ಸಾಮರ್ಥ್ಯದ ಸೌರಫಲಕಗಳನ್ನು ಅಳವಡಿಸಲಾಗುತ್ತಿದೆ. ಇಂಧನ ಸ್ವಾವಲಂಬನೆಯಲ್ಲಿ, ಆತ್ಮ ನಿರ್ಭರ ಭಾರತದ ಗುರಿ ಸಾಧನೆಯಾಗುತ್ತಿದೆ, ಎಂದಿದ್ದಾರೆ.

<><><>

**ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ಸಂಬಂಧಿಸಿದ,** ನಗರಾಭಿವೃದ್ಧಿ ಇಲಾಖೆ ಕಾಮಗಾರಿಗಳನ್ನು, ಆದ್ಯತೆ ಮೇಲೆ ಶೀಘ್ರ ಅನುಷ್ಠಾನಗೊಳಿಸಲು, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ, ವಿನಯ ಕುಲಕರ್ಣಿ, ನಗರಾಭಿವೃದ್ಧಿ ಖಾತೆ ಸಚಿವ ಡಾಕ್ಟರ್ ಯತೀಂದ್ರ ಸಿದ್ದರಾಮಯ್ಯ ಅವರಿಗೆ, ಮನವಿ ಮಾಡಿದ್ದಾರೆ. ಬೆಂಗಳೂರಿನ, ಸಚಿವರ ಗೃಹ ಕಚೇರಿಯಲ್ಲಿ, ಅವರು ಸಮಾಲೋಚಿಸಿದರು.

<><><>

**ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ,** ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ, ವಿಶ್ರಾಂತ ಪ್ರಾಧ್ಯಾಪಕ ಹಾಗೂ ವಿಶ್ವದ ಅತ್ಯುನ್ನತ, ಖ್ಯಾತನಾಮ ವಿಜ್ಞಾನಿಗಳ ಪಟ್ಟಿಯಲ್ಲಿ ಹೆಸರಿಸಲಾಗುವ, ಪ್ರೊಫೆಸರ್ ಶರಣಪ್ಪ ನಂದಿಬೇವೂರ ಅವರಿಗೆ, ವಿಜ್ಞಾನ ಕ್ಷೇತ್ರದಲ್ಲಿ ಕೈಗೊಂಡ,

ಗಮನಾರ್ಹ ಸಂಶೋಧನೆಗೆ, 2025ನೇ ಸಾಲಿನ, ಜಾಗತಿಕ ಮಾನ್ಯತೆ ಪ್ರಾಪ್ತವಾಗಿದೆ. ಪ್ರೊಫೆಸರ್ ಎಸ್.ಟಿ.ನಂದಿಬೇವೂರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಪ್ರೊಫೆಸರ್ ಎಸ್.ಟಿ. ನಂದಿಬೇವೂರ ಧ್ವನಿ 36 ಸೆಕೆಂದುಗಳು**

<><><>

**ಬೆಂಗಳೂರಿನ, ಸಂತಕವಿ ಕನಕದಾಸ** ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಆಯೋಜಿಸಿದ್ದ, ರಾಜ್ಯ ಮಟ್ಟದ ವಿಮರ್ಶಾ ಲೇಖನ ಸ್ಪರ್ಧೆಯಲ್ಲಿ, ಧಾರವಾಡದ ಧನಂಜಯಕುಮಾರ ಸುಳೇಕಲ್, ಪ್ರಥಮ ಸ್ಥಾನದೊಂದಿಗೆ, 5 ಸಾವಿರ ರೂಪಾಯಿ ನಗದು ಬಹುಮಾನ, ಗಳಿಸಿದ್ದಾರೆ. ದಾವಣಗೆರೆಯ ಗಗನಾ ಜೆ. ದ್ವಿತೀಯ ಸ್ಥಾನ, ಕೋಲಾರದ ಕುಪ್ಪನಹಳ್ಳಿ ಎಂ. ಬೈರಪ್ಪ ಹಾಗೂ ಬೆಂಗಳೂರಿನ ಚೆನ್ನರಾಜು ಎಂ. ತೃತೀಯ ಸ್ಥಾನ ಪಡೆದಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆಯಾದ್ಯಂತ,** ಗಣೇಶೋತ್ಸವ ಸಂದರ್ಭದಲ್ಲಿ, 75 ಡೆಸಿಬಲ್ ಗಿಂತ ಹೆಚ್ಚಿನ ಶಬ್ದ ಉಂಟು ಮಾಡುವ, ಧ್ವನಿ ವರ್ಧಕಗಳ ಬಳಕೆಯನ್ನು, ಸಂಪೂರ್ಣ ನಿಷೇಧಿಸಿ, ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಆದೇಶಿಸಿದ್ದಾರೆ.

<><><>

**ಧಾರವಾಡದ, ಶ್ರೀ ಮುರುಘಾಮಠದಲ್ಲಿ,** ಶ್ರಾವಣ ಮಾಸದ ಅಂಗವಾಗಿ, ಜರುಗಿದ ವಚನ ಪ್ರವಚನ ವಿಶೇಷ ಉಪನ್ಯಾಸ ಕಾರ್ಯಕ್ರಮದ, ಸಮಾರೋಪ, ಇಂದು ಸಂಜೆ 6 ಗಂಟೆಗೆ, ಶ್ರೀ ಮಠದ ಶಿವಾನುಭವ ಮಂಟಪದಲ್ಲಿ, ಜರುಗಲಿದೆ. ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಗಚ್ಚಿನಮಠದ ಶ್ರೀ ಶಿವಕುಮಾರ ಶಾಸ್ತ್ರಿ, ಸವದತ್ತಿ ತಾಲೂಕು, ಯಕ್ಕುಂಡಿ ವಿರಕ್ತಮಠದ, ಶ್ರೀ ಪಂಚಾಕ್ಷರಿ ಸ್ವಾಮೀಜಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ಪದ್ಮವಿಭೂಷಣ, ಡಾಕ್ಟರ್ ಮಲ್ಲಿಕಾರ್ಜುನ ಮನಸೂರ** ಅವರ, 34ನೇ ಪುಣ್ಯಸ್ಮರಣೆ ಅಂಗವಾಗಿ, ಧಾರವಾಡದ ಮನಸೂರ ಸ್ಮಾರಕ ಭವನದಲ್ಲಿ ಇಂದು ಬೆಳಗ್ಗೆ, ಗಣ್ಯರು ಸಮಾಧಿಗೆ ಗೌರವ ಅರ್ಪಿಸಿದರು. ಪಂಡಿತ ರಾಜಶೇಖರ ಮನಸೂರ ಅವರ ಶಿಷ್ಯ ಬಳಗದಿಂದ ಸಂಗೀತ ಕಾರ್ಯಕ್ರಮ ಜರುಗಿತು. ಇಂದು ಸಂಜೆ 5.30ಕ್ಕೆ, ಆಲೂರ ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಧಾರವಾಡದ, ಡಾಕ್ಟರ್ ಮಲ್ಲಿಕಾರ್ಜುನ ಮನಸೂರ, ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಿದೆ. ಮಂಗಳೂರಿನ ಅಂಕುಶ ನಾಯಕ, ಸಿತಾರ ವಾದನ ಹಾಗೂ ಮಹಾರಾಷ್ಟ್ರದ ಗಡಹಿಂಗ್ಲಜ್‌ನ, ಅರ್ಣವ್ ಬುವಾ ಅವರ, ಗಾಯನ ಕಚೇರಿ ಜರುಗಲಿದೆ. ಹಿರಿಯ ಕಲಾವಿದ, ಪಂಡಿತ ರಾಚಯ್ಯ ಹಿರೇಮಠ, ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಪದ್ಮಶ್ರೀ ಪಂಡಿತ ಎಂ.ವೆಂಕಟೇಶಕುಮಾರ, ಅಧ್ಯಕ್ಷತೆ ವಹಿಸುವರು.

<><><>

**ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ** ಮತದಾರರ ಕರಡು ಪಟ್ಟಿ ಪರಿಷ್ಕರಣೆ ವೇಳೆ, ನೇಪಾಳ ಪೌರತ್ವ ಹೊಂದಿರುವ, 10 ಜನರ ಹೆಸರು ಪತ್ತೆಯಾಗಿವೆ. ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ತಿಳಿಸಿದ್ದಾರೆ.

<><><>

**ಧಾರವಾಡ ಜಿಲ್ಲಾ ಕ್ರೀಡಾಂಗಣದಲ್ಲಿ,** 1 ಕೋಟಿ ರೂಪಾಯಿ ವೆಚ್ಚದಲ್ಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಿರ್ಮಿಸಲಿರುವ, ಕುಸ್ತಿ ಅಂಗಣ ಮತ್ತು ವ್ಯಾಯಾಮ ಕೋಣೆಯ ಕಾಮಗಾರಿಗೆ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಧಾರವಾಡ ಜಿಲ್ಲೆಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು, ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಹುಬ್ಬಳ್ಳಿ ನಗರದಲ್ಲಿ ಅಂತಾರಾಷ್ಟ್ರೀಯ ಸ್ಥರದ, ವಿವಿಧೋದ್ದೇಶ ಕ್ರೀಡಾ ಸಂಕೀರ್ಣ ನಿರ್ಮಾಣಗೊಂಡಿದ್ದು, 21 ಕ್ರೀಡೆಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

<><><>

**ಮೈಸೂರಿನಲ್ಲಿ, ಅಕ್ಟೋಬರ್** ನಾಲ್ಕರಂದು ನಡೆಯಲಿರುವ, 'ಟೂರ್ ಡಿ ಫ್ರಾನ್ಸ್' ಸರಣಿಯ, 'ಲಟೇಪ್ ಮೈಸೂರು', ಅಮೇಚ್ಯೂರ್ ಸೈಕ್ಲಿಂಗ್ ಸ್ಪರ್ಧೆಯ, ಮಾರ್ಗ ದಿಕ್ಸೂಚಿ ಹಾಗೂ ಜರ್ಸಿಯನ್ನು, ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆ ಆಯುಕ್ತ, ಎಂ.ಎನ್. ಅನುಚೇತ ಬಿಡುಗಡೆ ಗೊಳಿಸಿದರು. ಲಟೇಪ್ ಸೈಕ್ಲಿಂಗ್ ಸ್ಪರ್ಧೆ, 123 ವರ್ಷಗಳ ಇತಿಹಾಸ ಹೊಂದಿದೆ. ಭಾರತದಲ್ಲಿ ಇದೇ ಮೊದಲ ಬಾರಿಗೆ, ಆಯೋಜಿತವಾಗಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**